# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **433 (504)** |
| **ಮಾನ್ಯ ಸದಸ್ಯರ ಹೆಸರು** | **ಶ್ರೀ ಕೇಶವ ಪ್ರಸಾದ್ ಎಸ್.<br>(ವಿಧಾನಸಭೆಯಿಂದ ಚುನಾಯಿತರಾದವರು)** |
| **ಉತ್ತರಿಸಬೇಕಾದ ದಿನಾಂಕ** | **08.12.2023** |
| **ಉತ್ತರಿಸುವ ಸಚಿವರು** | **ಮಾನ್ಯ ಹಿಂದುಳಿದ ವರ್ಗಗಳ<br>ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ<br>ಸಚಿವರು** |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| **ಅ)** | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಮಂಜೂರಾಗಿದ್ದ ನಿಲಯ ಪಾಲಕರ (ಹಾಸ್ಟೆಲ್ ವಾರ್ಡನ್ ) ಹುದ್ದೆಗಳೆಷ್ಟು; ನಿಲಯ ಪಾಲಕರ ಹುದ್ದೆಗಳನ್ನು ರದ್ದುಪಡಿಸಲಾಗಿದೆಯೇ; | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಒಟ್ಟು 384 ನಿಲಯ ಪಾಲಕರ ಹುದ್ದೆಗಳು ಮಂಜೂರಾಗಿರುತ್ತವೆ. ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳು 2019 ರಲ್ಲಿ ನಿಲಯ ಪಾಲಕರ ಹುದ್ದೆಗಳನ್ನು ಕೆಳ ದರ್ಜೆಯ ವೇತನ ಶ್ರೇಣಿಯಲ್ಲಿ ನಿಗಧಿಪಡಿಸಲಾಗಿದೆ. |
| **ಆ)** | ರದ್ದುಪಡಿಸಿರುವ ನಿಲಯ ಪಾಲಕರ ಹುದ್ದೆಗಳನ್ನು ಮರು ಸೃಜಿಸಿ ಬಡ್ತಿ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದಕ್ಕೆ ಸರ್ಕಾರ ಅನುಮತಿ ನೀಡಿದೆಯೇ; | ಇಲಾಖೆಗೆ ಮಂಜೂರಾಗಿರುವ 384 ನಿಲಯ ಪಾಲಕರ ಹುದ್ದೆಗಳ ಪೈಕಿ ದಿನಾಂಕ: 29.09.2019 ರ ಅಂತ್ಯಕ್ಕೆ ಖಾಲಿ ಇದ್ದ 313 ಹುದ್ದೆಗಳಿಗೆ ಆದೇಶ ಸಂಖ್ಯೆ: ಹಿಂವಕ 92 ಬಿಇಟಿ 2023, ದಿನಾಂಕ: 21.07.2023 ರಲ್ಲಿ ನೀಡಿರುವ ಅನುಮತಿಯಂತೆ ಒಂದು ಬಾರಿಗೆ ಮಾತ್ರ ಅಧಿಕೃತ ಜ್ಞಾಪನ ಸಂಖ್ಯೆ. BCWD 1105/10/2022/ BCWD_ADMN Dated : 25/07/2023 ರಲ್ಲಿ ಆಯುಕ್ತಾಲಯದಿಂದ ಅರ್ಹ ನಿಲಯ ಮೇಲ್ವಿಚಾರಕರು (ಪುರುಷ) ವೃಂದದಿಂದ ನಿಲಯ ಪಾಲಕರ ಹುದ್ದೆಗೆ ನಿಯಮಾನುಸಾರ ಮುಂಬಡ್ತಿ ನೀಡಲಾಗಿರುತ್ತದೆ. |
| **ಇ)** | ಸರ್ಕಾರದ ಅನುಮತಿ ಪಡೆಯದೆ ಇಲಾಖೆಯ ಹಂತದಲ್ಲೇ ಅವಕಾಶ ಇಲ್ಲದಿದ್ದರೂ ರದ್ದಾದ ಹುದ್ದೆಗೆ ಮುಂಬಡ್ತಿ ನೀಡಿರುವ ಈ ಪ್ರಕರಣದಲ್ಲಿ ತಪ್ಪಿತಸ್ಥರು ಯಾರಿದ್ದಾರೆ, ಅವರ ವಿರುದ್ಧ ಕೈಗೊಂಡಿರುವ ಕ್ರಮವೇನು; | |
| **ಈ)** | ನಿಲಯ ಪಾಲಕರ ಹುದ್ದೆಗಳನ್ನು ರದ್ದುಗೊಳಿಸಿರುವುದರಿಂದ ಮುಂಬಡ್ತಿ ನೀಡಲು ಅವಕಾಶ ಇಲ್ಲವೆಂದು ಹಿಂಬರಹ ನೀಡಿದ್ದ ಅಧಿಕಾರಿಯೇ ಮತ್ತೆ ತಮ್ಮ ನಿಲುವು ಬದಲಿಸಿ, ಮುಂಬಡ್ತಿ ನೀಡಿರುವ ಈ ಪ್ರಕರಣವನ್ನು ಸರ್ಕಾರ ತನಿಖೆಗೆ ವಹಿಸಿದೆಯೇ? | ನಿಲಯ ಪಾಲಕರ ಹುದ್ದೆಗೆ ಮುಂಬಡ್ತಿ ನೀಡಲು ಅವಕಾಶ ಇಲ್ಲವೆಂದು ದಿನಾಂಕ:9.3.2022 ರಂದು ಹಿಂಬರಹ ನೀಡಲಾಗಿರುತ್ತದೆ. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ನಿಯಮಾನುಸಾರ ಮುಂಬಡ್ತಿಗೆ ಅರ್ಹರಿದ್ದು ಯಾವುದೇ ಮುಂಬಡ್ತಿ ಇಲ್ಲದೇ ನಿರಂತರವಾಗಿ 20 ವರ್ಷಗಳು ಒಂದೇ ಹುದ್ದೆಯಲ್ಲಿ ಸೇವೆ ಸಲ್ಲಿಸಿ, 2019ರಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳ ಪರಿಷ್ಕರಣೆಯ ಪೂರ್ವದಲ್ಲಿಯೇ ಖಾಲಿ ಇದ್ದ ಹುದ್ದೆಗಳಿಗೆ ಮತ್ತು ಪದೋನ್ನತಿಗೆ ಅರ್ಹರಿದ್ದ ನೌಕರರಿಗೆ, ನ್ಯಾಯಯುತವಾಗಿ ದೊರಕಬೇಕಾಗಿದ್ದ ಮುಂಬಡ್ತಿಯಿಂದ ವಂಚಿತರಾಗಿದ್ದುದರಿಂದ ಇಲಾಖೆಯ ವಿದ್ಯಾರ್ಥಿ ನಿಲಯಗಳ ಸುಗಮ ಆಡಳಿತ ನಿರ್ವಹಣೆಯ ಹಿತದೃಷ್ಠಿಯಿಂದ ನಿಲಯ ಪಾಲಕರ ಹುದ್ದೆಗಳಿಗೆ ಒಂದು ಬಾರಿಯ ಕ್ರಮವಾಗಿ ಮಾತ್ರ ಅರ್ಹ ನೌಕರರಿಗೆ ಪದೋನ್ನತಿ ನೀಡಲಾಗಿರುತ್ತದೆ. |

**ಸಂಖ್ಯೆ:ಹಿಂವಕ 377 ಬಿಇಟಿ 2023**

**(ಶಿವರಾಜ ಎಸ್. ತಂಗಡಗಿ)**
**ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ**
**ಕನ್ನಡ ಮತ್ತು ಸಂಸ್ಕೃತಿ ಸಚಿವರು**